

# ಮಿಸ್ಟರ್ ಮ್ಯಾಗ್ನೆಟ್





ಮಲೇಷ್ಯಾದ ಲೀವ್ ಥೌ ಲಿನ್ ಎಂಬ 70 ವರ್ಷದ ನಿವೃತ್ತ ಕಾಂಟ್ರಾಕ್ಟರ್ ಅತ್ಯಂತ ವಿಶೇಷವಾದ ಸಾಮರ್ಥ್ಯವನ್ನು ಹೊಂದಿದ್ದಾನೆ. ಫೋರ್ಕ್,ಐರನ್ ಬಾಕ್ಸ್, ಸುತ್ತಿಗೆ... ಈ ತರಹದ ಯಾವುದೇ ತಲಾ 2 ಕೆಜಿಯಷ್ಟು ತೂಗುವ ಒಟ್ಟು 36 ಕೆ.ಜಿ ಯ ಸಾಮಾನುಗಳನ್ನು ತನ್ನ ದೇಹಕ್ಕೆ ಅಂಟಿಸಿಕೊಂಡು ಬೀಳದಂತೆ ಹಿಡಿದಿಟ್ಟುಕೊಳ್ಳಬಲ್ಲ. ಅಂತೆಯೇ ಲೀವ್ ಥೌ ಲಿನ್ ಈಗ ಜನರ ದೃಷ್ಟಿಯಲ್ಲಿ ಅಯಸ್ಕಾಂತದ ಮನುಷ್ಯ ಅಂದರೆ 'ಮಿಸ್ಟರ್ ಮ್ಯಾಗ್ನೆಟ್'.

ಲಿನ್, ಕಬ್ಬಿಣದ ಪ್ಲೇಟನ್ನು ಹೊಟ್ಟೆಗೆ ಅಂಟಿಸಿಟ್ಟುಕೊಂಡು ಕಬ್ಬಿಣದ ಸರಪಳಿಯ ಸಹಾಯದಿಂದ ಕಾರನ್ನು 20 ಮೀಟರ್ ದೂರದವರೆಗೆ ಅನಾಯಾಸವಾಗಿ ಎಳೆದು ತೋರಿಸಿದ್ದಾನೆ. ಕಬ್ಬಿಣದ ಸಾಧನವೊಂದನ್ನು ಕಂಕುಳದಲ್ಲಿರಿಸಿಕೊಂಡು 10.6 ಟನ್ ಭಾರದ ಬಸ್ಸನ್ನು ಸ್ವಲ್ಪವೂ ಶ್ರಮವಿಲ್ಲದೆ ಕೇವಲ ತನ್ನ ಮ್ಯಾಗ್ನೆಟ್ ಬಲದಿಂದ ಎಳೆದು ತೋರಿಸಿದ್ದಾನೆ.

ಲಿನ್ ನ ಈ ವಿಶೇಷತೆಯನ್ನು ನೋಡಿದ ಮಲೇಷ್ಯಾ ತಾಂತ್ರಿಕ ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗಳು ಇದರ ಬಗ್ಗೆ ವಿಶೇಷ ಅಧ್ಯಯನ ನಡೆಸಿದ್ದಾರೆ. ಅವರ ಪ್ರಕಾರ ಲಿನ್, ಯಾವುದೇ ಅಯಸ್ಕಾಂತೀಯ ಗುಣವನ್ನು ಹೊಂದಿಲ್ಲ. ಆದರೆ ಈತನ ಚರ್ಮವು ಹೆಚ್ಚಿನ ಮಟ್ಟದ ಫ್ರಿಕ್ಷನ್ ಅನ್ನು ತೋರುವುದರಿಂದ ಈ ಸಕ್ಷನ್ ಎಫೆಕ್ಟ್ ಅನ್ನು ಹೊಂದಿದೆಯಂತೆ. ತನ್ನಲ್ಲಿರುವ ಈ ವಿಶಿಷ್ಟತೆ ಬಗ್ಗೆ ತನಗೇ ಅಚ್ಚರಿಯಾಗಿದೆ ಎಂದು ನುಡಿಯುವ ಲಿನ್ ಈ ಉಡುಗೊರೆಯನ್ನು ತನ್ನ ಮೂವರು ಮಕ್ಕಳಿಗೂ,ಈರ್ವರು ಮೊಮ್ಮಕ್ಕಳಿಗೂ ನೀಡಿದ್ದಾನೆ.

■ ವಿದ್ಯಾ ಹಾಲಭಾವಿ